ಆ) ಬಾಗಿದ್ದ ಪಕ್ಷದಲ್ಲಿ ಯಾವಾಗ ಈ ಟ್ರಾಫಿಕ್ ಪೊಲೀಸ್ ಠಾಣೆಯನ್ನು ತೆರೆಯಲಾಗುವುದು ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಯವರು).—

ಆ) ಹೌದು.

ಆ) ಈ ವಿಷಯವು ಸರ್ಕಾರದ ತೀವ್ರ ಪರಿಶೀಲನೆಯಲ್ಲಿದ್ದು ಅದಷ್ಟು ಜಾಗ್ರತೆ ತೀರ್ಮಾನ ತೆಗೆದುಕೊಳ್ಳಲಾಗುವುದು.

श्री महमद ऊमर :—श्री रामकृष्ण हेगडेजी, 1983 ईसवी से ट्राफिक स्टेशन के सिलसिले में यह आश्वासन सरकार से हो रहा है। मैं चाहता हूँ कि आपकी तौर से यह काम हो जाएगा। मैं इस सम्बन्ध में तारीख चाहता हूँ।

श्री रामकृष्ण हेगडे (माननीय मुख्यमंत्री) :— मुझे अफसोस है। कि वादा तो ज़रूर था, उसको पूरा नहीं कर सका। हमारी हालत जब सुधारेगी तब यह काम करेंगे ।

ಶ್ರೀ ಎನ್.ಎಸ್. ಖೇಡ್.—ಅವರು ಏನು ಮಾತನಾಡಿದರು ಎಂದು ನಮಗೆ ಗೊತ್ತಾಗಿಲ್ಲ.

ಶ್ರೀ ಎಂ. ಎಸ್. ಆಡ್ಯಂತಾಯ.—ಸನ್ಮಾನ್ಯ ಸದಸ್ಯರು ಏನು ಕೇಳಿದರು. ಅದಕ್ಕೆ ಮುಖ್ಯ ಮಂತ್ರಿಗಳು ಏನು ಹೇಳಿದರು ಎನ್ನುವುದನ್ನು ಕನ್ನಡದಲ್ಲಿಯೂ ಕೂಡ ಹೇಳಬೇಕಾಗಿತ್ತು.

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಅವರು ಹೇಳಿದ್ದು.....

ಅಧ್ಯಕ್ಷರು.—ಟೈಮ್ ಕೇಳಿದ್ದಾರೆ. ಸಾಧ್ಯವಾದಷ್ಟು ಪ್ರಯತ್ನ ಮಾಡಿ ಬೇಗ ಉತ್ತರ ಕೊಡಿಸಲಿಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಎನ್.ಎಸ್. ಖೇಡ್.—ಅವರು ಕೇಳಿರುವುದನ್ನು ಕನ್ನಡದಲ್ಲಿಯೇ ಕೇಳಲಿ.

ಅಧ್ಯಕ್ಷರು.—ಒಂದು ಸರ್ತಿ ನಿಮಗೆ ಹೇಳಿದ್ದೇನೆ, ಅದನ್ನು ತಿಳಿದುಕೊಳ್ಳಿ.

ರಾಯಚೂರು ಜಿಲ್ಲೆಯ ಅಳವಂಡಿಯಲ್ಲಿ ಬಸ್ ನಿಲ್ದಾಣ ನಿರ್ಮಿಸುವುದು.

೧೨೭೦. ಶ್ರೀ ಬಿ.ವಿ. ತುಂಗಳ್(ಬೀಳಗಿ).—ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಎಂಟು ಸಾವಿರ ಜನಸಂಖ್ಯೆ ಇರುವ ಹಳ್ಳಿಗಳಲ್ಲಿ ಬಸ್ ನಿಲ್ದಾಣಗಳನ್ನು ನಿರ್ಮಿಸುವುದಾಗಿ ಮಾನ್ಯ ಸಾರಿಗೆ ಸಚಿವರು ದಿನಾಂಕ ೮-೩-೮೮ ರಂದು ರಾಯಚೂರು ಜಿಲ್ಲೆಯ ಅಳವಂಡಿಯಲ್ಲಿ ಹೇಳಿಕೆ ಕೊಟ್ಟಿದ್ದು ನಿಜವೇ,

ಆ) ಹಾಗಿದ್ದಲ್ಲಿ, ಬೀಳಗಿ ಕ್ಷೇತ್ರದ ಸಾವಳಗಿ ಮತ್ತು ಗಲಗಲಿ ಗ್ರಾಮಗಳಿಗೆ ಈ ಸೌಕರ್ಯ ಅನ್ವಯಿಸುತ್ತದೆಯೇ,

ಇ) ಸಚಿವರು ಹೇಳಿದ ಗುರಿ ಸಾಧಿಸಲು ಕಾಲಮಿತಿಯು ಕಾರ್ಯಕ್ರಮವೇನಾದರೂ ಇದೆಯೇ,

ಶ್ರೀ ಪಿ.ಜಿ.ಆರ್. ಸಿಂಧ್ಯ (ಸಾರಿಗೆ ಮಂತ್ರಿಗಳು).—

ಅ) ಹೌದು.

ಆ) ಈ ಸಾಲಿನಲ್ಲಿ ಸಾವಳಗಿಯಲ್ಲಿ ಮಾತ್ರ ಬಸ್ ನಿಲ್ದಾಣ ಕೈಗೊಳ್ಳಲು ಯೋಜಿಸಲಾಗಿದೆ.

ಇ) ಇಲ್ಲ.

ಶ್ರೀ ಬಾಬುರೆಡ್ಡಿ ವಿ. ತುಂಗಳ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಸಾರಿಗೆ ಸಚಿವರು ಕೆಲವು ದಿವಸಗಳ ಹಿಂದೆ ಮುಂಡರಗಿ ತಾಲ್ಲೂಕಿನ ಅಳವಂಡಿಗೆ ಒಂದು ಬಸ್ ನಿಲ್ದಾಣ ಕೊಡುತ್ತೇವೆಂದು ಬಸ್ ನಿಲ್ದಾಣಕ್ಕೆ ಅಡಿಗಲ್ಲನ್ನು ಹಾಕುವಾಗ ಹೇಳಿಕೆ ಕೊಟ್ಟಿದ್ದಾರೆ. ರಾಜ್ಯದಲ್ಲಿ ೮ ಸಾವಿರ ಜನ ಸಂಖ್ಯೆಗಿಂತ ಮೇಲ್ಪಟ್ಟು ಇರುವಂತಹ ಎಲ್ಲಾ ಊರುಗಳಿಗೆ ಒಂದು ಬಸ್ ಸ್ಟ್ಯಾಂಡ್ ಅನ್ನು ಅವರ ಇಲಾಖೆಯ ವತಿಯಿಂದ ಮಾಡುತ್ತೇವೆಂದು ಹೇಳಿಕೆ ಕೊಟ್ಟಿದ್ದಾರೆ. ಇದರಿಂದ ೮ ಸಾವಿರಕ್ಕಿಂತ ಹೆಚ್ಚು ಜನಸಂಖ್ಯೆ ಉಳ್ಳ ಎಲ್ಲಾ ಜನರಿಗೆ ಬಸ್ ಸ್ಟ್ಯಾಂಡ್ ನಮ್ಮಲ್ಲಿ ಬರಬಹುದು ಎಂದು ಆಸೆ ಸಹಜವಾಗಿ ಹುಟ್ಟುತ್ತದೆ. ನನ್ನ ಬೀಳಗಿ ಕ್ಷೇತ್ರದ ಗಲಗಲಿ ಎಂಬ ಗ್ರಾಮದಲ್ಲಿ ೧೨ ಸಾವಿರಕ್ಕಿಂತ ಹೆಚ್ಚು ಜನಸಂಖ್ಯೆ ಇದೆ. ಅಲ್ಲಿ ಪ್ರತಿನಿತ್ಯ ಆ ಕಡೆಯಿಂದ ಬೇರೆ ಬೇರೆ ಊರುಗಳಿಗೆ ಸುಮಾರು ೮೦ಕ್ಕೂ ಹೆಚ್ಚು ಬಸ್‌ಗಳು ಓಡಾಡುತ್ತವೆ. ಮಾನ್ಯ ಸಚಿವರು ಹೇಳಿಕೆ ಕೊಟ್ಟ ಮೇಲೆ ೮ ಸಾವಿರಕ್ಕಿಂತ ಹೆಚ್ಚು ಜನಸಂಖ್ಯೆ ಇರತಕ್ಕಂಥ ಊರುಗಳಿಗೆ ಬಸ್ ನಿಲ್ದಾಣವನ್ನು ಮಾಡುವಂತಹ ಕಾರ್ಯದಲ್ಲಿ ನಮ್ಮ ಗಲಗಲಿ ಗ್ರಾಮ ಕೂಡ ಸೇರಬೇಕಾಗಿತ್ತಲ್ಲಾ. ಇದು ಒಂದು ಮಾತು. ಮತ್ತೊಂದು ಪ್ರಶ್ನೆ ಸಾವಳಗಿ ಗ್ರಾಮದಲ್ಲಿ ಬಸ್ ಸ್ಟ್ಯಾಂಡ್ ಕಟ್ಟಲು ಯೋಜಿಸಲಾಗಿದೆ ಎಂದು ಮಾನ್ಯ ಸಚಿವರು ಹೇಳಿದ್ದಾರೆ. ತಮ್ಮ ಮುಖಾಂತರ ಅವರಿಗೆ ಒತ್ತಾಯ ಪೂರ್ವಕವಾಗಿ ಹೇಳಬಯಸುತ್ತೇನೆ. ಸಾವಳಗಿಯಲ್ಲಿ ಬಸ್ ಸ್ಟ್ಯಾಂಡ್ ಅನ್ನು ನಿರ್ಮಾಣ ಮಾಡುತ್ತೇವೆಂದು ಹೇಳಿರುವುದು ಬಹುಶ: ಇದೇ ಸದನದಲ್ಲಿ ಮೂರನೇ ಸಲ. ಈ ವಿಷಯವಾಗಿ ಅವರು ಹೇಳಿಕೆ ಕೊಡುವಾಗ ಮೊದಲನೇ ಸಲ ಬಸ್ ಸ್ಟ್ಯಾಂಡ್‌ನ್ನು ಕಟ್ಟುವಾಗ ರಿಪೇರಿಗಾದರೂ ಟಿಂಡರ್‌ನ್ನು ಕರೆಯಬೇಕಾಗಿತ್ತು ಅವರ ಎಸ್‌ನಂತೆ ಬಸ್ ಸ್ಟ್ಯಾಂಡ್ ಕೂಡ ಬ್ರೇಕ್ ಡೌನ್ ಆಗಿದೆ ಎಂದು ಕಾಣುತ್ತದೆ ಹೋದ ಸಲ ಒಂದೂವರೆ ಲಕ್ಷ ರೂಪಾಯಿ ಅಂದಾಜು ವೆಚ್ಚ ಈ ಕಾರ್ಯಕ್ಕಾಗಿ ಇತ್ತು. ಈ ಸಲ ಅಂದಾಜು ವೆಚ್ಚ ಇಲ್ಲ. ಈ ಬಗ್ಗೆ ಒಂದು ಸರಿಯಾದ ಕ್ರಮ ಸಚಿವರದ್ದು ಏನು ಎಂದು ತಮ್ಮ ಮುಖಾಂತರ ಕೇಳುತ್ತೇನೆ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಮಾನ್ಯ ಅಧ್ಯಕ್ಷರೇ, ೮ ಸಾವಿರ ಜನಸಂಖ್ಯೆ ಇರತಕ್ಕ ಎಲ್ಲಾ ರಾಷ್ಟ್ರೀಕರಣ ಆಗಿರತಕ್ಕಂಥ ಪ್ರದೇಶಗಳಿಗೆ ಬಸ್ ಸ್ಟ್ಯಾಂಡ್ ಅನ್ನು ಕೊಡಬೇಕೆಂದು ಒಂದಂ ಕಾರ್ಯಕ್ರಮ ಸಾರಿಗೆ ಸಂಸ್ಥೆ ಮುಂದೆ ಇದೆ. ಈ ರೀತಿ ಹೇಳಿರತಕ್ಕದ್ದು ನಿಜ ಆದೇ ರೀತಿ ಬೀಳಗಿ ಕ್ಷೇತ್ರದ ಸಾವಳಗಿ ಗ್ರಾಮ ಮತ್ತು ಗಲಗಲಿ ಗ್ರಾಮಗಳಲ್ಲಿ ೮ ಸಾವಿರಕ್ಕಿಂತ ಹೆಚ್ಚು ಜನಸಂಖ್ಯೆ ಇರುವುದರಿಂದ ಎರಡೂ ಕಡೆಗಳಲ್ಲಿ ಬಸ್ ನಿಲ್ದಾಣವನ್ನು ನಿರ್ಮಿಸುತ್ತೇವೆ. ಈ ವರ್ಷ ಸಾವಳಗಿಯಲ್ಲಿ ಬಸ್ ಸ್ಟ್ಯಾಂಡ್ ಅನ್ನು ಕಟ್ಟಲಿಕ್ಕೆ ಎಲ್ಲಾ ಕ್ರಮಗಳನ್ನು ತೆಗೆದುಕೊಂಡಿದ್ದೇವೆ. ಈಗಾಗಲೇ ಇದಕ್ಕೆ ಬೇಕಾಗಿರತಕ್ಕಂಥ ಒಂದೂವರೆ ಲಕ್ಷ ರೂಪಾಯಿ ಹಣವನ್ನು ಇದಕ್ಕೋಸ್ಕರವಾಗಿಯೇ ತೆಗೆದು ಇಟ್ಟಿದ್ದೇವೆ.

ಶ್ರೀ ಬಾಬುರೆಡ್ಡಿ ವಿ. ತುಂಗಳ್.—ಗಲಗಲಿಯಲ್ಲಿ ಬಸ್ ಸ್ಟ್ಯಾಂಡ್ ಅನ್ನು ಕಟ್ಟಲು ಪಂಚಾಯ್ತಿ ಅವರು ಉಚಿತವಾಗಿ ಜಾಗವನ್ನು ಕೊಟ್ಟಿದ್ದಾರೆ. ಇದು ಕೊಟ್ಟು ಒಂದು ಒಂದೂವರೆ ವರ್ಷ ಆಯಿತು ಕೆ.ಎಸ್.ಆರ್.ಟಿ.ಸಿ. ಅಧಿಕಾರಿಗಳು ೮ ನೂರು ರೂಪಾಯಿಯನ್ನು ನಾಮ್ ಕ ವಾಸ್ತೆ ಕೊಟ್ಟಿದ್ದಾರೆ. ಬಹುಶ: ಅಧಿವೇಶನ ಮುಗಿಯುವುದರೊಳಗೆ ಅಥವಾ ಮುಗಿದ ನಂತರವಾದರೂ ದಯವಾಡಿ ಸಚಿವರು ಇಲ್ಲಿಗೆ ದಯವಾಡಿಸಿ ಬಸ್ ಸ್ಟ್ಯಾಂಡ್‌ಗಾಗಿ ಅಡಿಗಲ್ಲನ್ನು ಹಾಕುತ್ತಾರೆಂದು ಆಶಿಸುತ್ತೇನೆ. ಯಾಕೆಂದರೆ ಇದು ಮಾಜಿ ರಾಷ್ಟ್ರಪತಿಗಳ ಊರು ಆಗಿದೆ. ಇದನ್ನು ಮಾಡಿಸುವುದಕ್ಕೆ ಪ್ರಯತ್ನ ಮಾಡಬೇಕೆಂದು ತಮ್ಮ ಮೂಲಕ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಪಿ. ಜಿ. ಆರ್. ಸಿಂಧ್ಯ —ಈ ವರ್ಷ ಸಾವಳಗಿಯಲ್ಲಿ ಬಸ್ ಸ್ಟ್ಯಾಂಡ್ ಕಟ್ಟುತ್ತಾ ಇದ್ದೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಡಿಪಿಡೆಂಟ್ ಲೀಡರ್ಸ್ ಇದ್ದಾರೆ, ಮಾಡುವುದಿಲ್ಲವೆಂದು ಹೇಳಂತಾರಾ ? ಮಾಡುತ್ತೇವೆಂದು ಕೇಳುತ್ತಾರೆ.

ಅಧ್ಯಕ್ಷರು.—ಮಾನ್ಯ ಖರ್ಗೆಯವರೇ, ನೀವು ಡಿವೈಡ್ ಆಂಡ್ ರೂಲ್ ಮಾಡುವುದಕ್ಕೆ ಪ್ರಯತ್ನ ಮಾಡಬೇಡಿ.

ಅಧ್ಯಕ್ಷರು.—ಶ್ರೀ ಎನ್. ಟಿ. ಬೊಮ್ಮಣ್ಣ ಗೈರು ಹಾಜರಿ.

ಬಸ್ ಮಾರ್ಗಗಳನ್ನು ರಾಷ್ಟ್ರೀಕರಣ ಮಾಡುವುದು

೧೨೬೯. ಶ್ರೀ ಎನ್. ಎಂ. ಅಡ್ಯಂತಾಯ (ಸಂರತ್ಕಲ್).—ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಏಪ್ರಿಲ್ ೧೯೬೬ ರಿಂದ ಮಾರ್ಚ್ ೧೯೬೮ರವರೆಗೆ ರಾಜ್ಯದ ಎಷ್ಟು ಜಿಲ್ಲೆಗಳಲ್ಲಿ ಬಸ್‌ಮಾರ್ಗಗಳನ್ನು ರಾಷ್ಟ್ರೀಕರಣ ಮಾಡಲಾಗಿದೆ?

ಆ) ಮೇಲ್ಕಂಡ ಮಾರ್ಗಗಳಲ್ಲಿ ರಾಷ್ಟ್ರೀಕರಣ ಪೂರ್ವ ಹಾಗೂ ರಾಷ್ಟ್ರೀಕರಣದ ನಂತರ ಓಡಾಡುತ್ತಿರುವ ಬಸ್ಸುಗಳ ಸಂಖ್ಯೆ ಎಷ್ಟು ?

ಇ) ಈ ರಾಷ್ಟ್ರೀಕರಣದಿಂದ ನಿರುದ್ಯೋಗಿಗಳಾಗಿರುವ ನೌಕರರ ಸಂಖ್ಯೆ ಎಷ್ಟು.

ಈ) ಈ ನೌಕರರ ಭವಿಷ್ಯಕ್ಕಾಗಿ ಸರ್ಕಾರ ಕೈಗೊಂಡ ಕ್ರಮಗಳೇನು ?

ಶ್ರೀ ಪಿ. ಜಿ. ಆರ್. ಸಿಂಧ್ಯ (ಸಾರಿಗೆ ಮಂತ್ರಿಯವರು).—

ಅ) ಏಪ್ರಿಲ್ ೧೯೬೬ ರಿಂದ ಮಾರ್ಚ್ ೧೯೬೮ರವರೆಗೆ ರಾಯಚೂರು ಜಿಲ್ಲೆಯಲ್ಲಿ ೧೭ ಮಾರ್ಗಗಳು ಮತ್ತು ಚಿತ್ರದುರ್ಗ ಜಿಲ್ಲೆಯ ಚಿತ್ರದುರ್ಗ—ದಾವಣಗೆರೆ ವಿಕಮಾರ್ಗವನ್ನು ರಾಷ್ಟ್ರೀಕರಣಕ್ಕೆ ಒಳಪಡಿಸಲಾಗಿದೆ.

ಆ) ರಾಯಚೂರು ಜಿಲ್ಲೆಯಲ್ಲಿ ರಾಷ್ಟ್ರೀಕರಣಕ್ಕೆ ಮುಂಚೆ ೧೨೮ ಬಸ್ಸುಗಳು ಓಡಾಡುತ್ತಿದ್ದವು. ರಾಷ್ಟ್ರೀಕರಣದ ನಂತರ ೨೪೨ ಬಸ್ಸುಗಳು ಓಡುತ್ತಿವೆ.

ಚಿತ್ರದುರ್ಗ—ದಾವಣಗೆರೆ ಮಾರ್ಗದ ಮೇಲೆ ೨೮ ಬಸ್ಸುಗಳು ಓಡುತ್ತಿದ್ದವು, ರಾಷ್ಟ್ರೀಕರಣದ ನಂತರ ೪೮ ಬಸ್ಸುಗಳು ಓಡುತ್ತಿವೆ.

ಇ) ರಾಷ್ಟ್ರೀಕರಣದಿಂದ ನಿರುದ್ಯೋಗಿಗಳಾದವರ ನಿರ್ದಿಷ್ಟ ಸಂಖ್ಯೆ ತಿಳಿಸಲು ಸಾಧ್ಯವಾಗುತ್ತಿಲ್ಲ. ಕಾರಣವೇನೆಂದರೆ ತುಂಬ ಹೆಚ್ಚಿನ ಪ್ರಮಾಣದಲ್ಲಿ ಅರ್ಜಿಗಳು ಬಂದಿರುವುದು ಹಾಗೂ ನಿರ್ದಿಷ್ಟ ಮಾಹಿತಿ ಯಿಲ್ಲದಿರುವುದು.

ಈ) ಈ ರಾಷ್ಟ್ರೀಕರಣದಿಂದ ಕೆಲಸ ಕಳೆದುಕೊಂಡವರ ಭವಿಷ್ಯಕ್ಕಾಗಿ ರಾಜ್ಯ ಸರ್ಕಾರವು ಸಾರಿಗೆ ಸಂಸ್ಥೆಗೆ ಒಂದು ನೀತಿಗೆ ಒಳಪಡುವಂತೆ ನಿರ್ದಿಷ್ಟವಾದ ಸಂಖ್ಯೆಯ ನೌಕರರನ್ನು ತೆಗೆದುಕೊಳ್ಳಲು ಆದೇಶ ಕೊಟ್ಟಿದೆ.

ಶ್ರೀ ಎನ್. ಎಂ. ಅಡ್ಯಂತಾಯ.—ಮಾನ್ಯ ಅಧ್ಯಕ್ಷರೇ, ೧೯೬೬ ಏಪ್ರಿಲ್ ನಿಂದ ಮಾರ್ಚ್ ೧೯೬೮ ರವರೆಗೆ ೧೭ ಮಾರ್ಗಗಳನ್ನು ರಾಷ್ಟ್ರೀಕರಣ ಮಾಡಲಾಗಿದೆ ಎಂದು ಹೇಳಿದ್ದಾರೆ. ಇದು ಈ ಸರ್ಕಾರದ ರಾಷ್ಟ್ರೀಕರಣದ ಬಗ್ಗೆ ಇರುವಂತಹ ಜಡ್ಡು ಮನೋಭಾವವನ್ನು ತೋರಿಸುತ್ತದೆ. ಇದರ ಬಗ್ಗೆ ನಾನು ಈಗ ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ಇಲ್ಲಿ ನನ್ನ ಪ್ರಶ್ನೆ ಇಷ್ಟೆ, ಇವರು ರಾಷ್ಟ್ರೀಕರಣ ಮಾಡಿರುವ ಬಸ್‌ಗಳ ಪೈಕಿ the number of individual bus operators affected. ಇದಕ್ಕೆ ಉತ್ತರ ಬೇಕು. ಹಾಗೂ ನನ್ನ 'ಇ' ಪ್ರಶ್ನೆಗೆ ಉತ್ತರವಾಗಿ ಇಲ್ಲಿ ಹಾರಿಕೆ ಉತ್ತರವನ್ನು ಕೊಟ್ಟಿದ್ದಾರೆ They have replied, 'The exact figures cannot be arrived at because of receipt of innumerable and in some cases incomplete applications. ಇಂತಹ ಒಂದು ಸಂದರ್ಭದಲ್ಲಿ ರಾಷ್ಟ್ರೀಕರಣ ಮಾಡಿದಂತೆ ಒಂದು ಬಸ್‌ಗೆ ಇಷ್ಟು ಜನರು ಎಂದು ಅಂದರೆ ನಾಲ್ಕೈದು ಜನರ ಪ್ರಕಾರ ಲೆಕ್ಕ ತೆಗೆದುಕೊಂಡು ಆ ಬಸ್‌ನಲ್ಲಿ ಕೆಲಸ ಮಾಡುತ್ತಿದ್ದ ಆಪರೇಟರ್ಸ್ ಹೆಸರುಗಳನ್ನು ತೆಗೆದುಕೊಂಡು ಹಾಗೂ ಆ ಕಾರ್ಮಿಕರಿಂದ ಅರ್ಜಿಗಳನ್ನು ತೆಗೆದುಕೊಂಡು ಕೆಲಸವನ್ನು ಒದಗಿಸಬೇಕಾಗಿತ್ತು. ಆದರೆ ಇವರು ಹೊಸದಾಗಿ ರಾಷ್ಟ್ರೀಕರಣ ಮಾಡಿದ ಸುಮಾರು ೧೫೬ ಮಾರ್ಗ